ದಿನಾಂಕಃ 05.04.2025

ಅಸಲುದಾವಃ 145/2023

ಪಿ.ಡಬ್ಲ್ಯೂ: 1

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಸರ್ಕಾರದವರು ಆಧಾರ್ ಕಾರ್ಡ್, ವೋಟರ್ ಕಾರ್ಡ್ ಮತ್ತು ರೇಷನ್ ಕಾರ್ಡ್ ಅನ್ನು ಕೊಟ್ಟಿದ್ದಾರೆ, ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ. ನನಗೆ ಬಿ.ಪಿ.ಎಲ್.ರೇಷನ್ ಕಾರ್ಡ್ ಇರುತ್ತದೆ. ಬಿ.ಪಿ.ಎಲ್. ಕಾರ್ಡ್ ಪಡೆಯಲು ನಿಮ್ಮ ವಾರ್ಷಿಕ ಆದಾಯ ಎಷ್ಟು ಎಂದು ತೋರಿಸಿದ್ದೀರಿ ಎಂದರೆ ಸಾಕ್ಷಿ ರೂ.10 ಸಾವಿರ ಎಂದು ಉತ್ತರಿಸುತ್ತಾರೆ. ಪ್ರದೀಪ್ ಅವರು ಮನೆ ನಮ್ಮ ಮನೆಯಿಂದ 3 ಕೀ.ಮೀ. ದೂರವಿದೆ. ನಿಮ್ಮ ವಕೀಲರ ಬಳಿ ಪ್ರಮಾಣ ಪತ್ರ ತಯಾರಿಸುವ ವೇಳೆ ಪ್ರದೀಪ್ ನಿಮ್ಮ ಮನೆಗೆ ಬಂದಿದ್ದರು ಎಂದು ಹೇಳಿದ್ದೀರ ಎಂದರೆ ಸಾಕ್ಷಿ ಆ ದಿನ ಪ್ರದೀಪ್ ನಮ್ಮ ಮನೆಗೆ ಬಂದಿರುವುದಿಲ್ಲ, ಕೆಲಸದಿಂದ ನಮ್ಮ ಮನೆಯ ಹತ್ತಿರ ಬರುತ್ತಿರುವಷ್ಟರಲ್ಲಿ ಅಪಘಾತ ಆಗಿತ್ತು ಎಂದು ಉತ್ತರಿಸುತ್ತಾರೆ. ಈ ಮೇಲಿನ ರೀತಿ ನನ್ನ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪ್ರಸನ್ನ ರೂ.25 ಸಾವಿರ ಸಂಪಾದನೆ ಮಾಡುತ್ತಿದ್ದರು ಎಂದು ತೋರಿಸಲು ದಾಖಲಾತಿ ಕೊಟ್ಟಿದ್ದೇನೆ. ನಿಮ್ಮ ಮನೆಗು ಅಪಘಾತವಾದ ಸ್ಥಳಕ್ಕೂ ಎಷ್ಟು ದೂರವಿತ್ತು ಎಂದರೆ ಸಾಕ್ಷಿ ಸುಮಾರು 50 ಮೀಟರ್ ದೂರವಿತ್ತು ಎಂದು ಉತ್ತರಿಸುತ್ತಾರೆ. ನಮ್ಮ ಮನೆಯ ಒಳಗಡೆಯಿಂದಲೇ ಆ ಜಾಗ ಕಾಣುತ್ತಿತ್ತು ಎಂದರೆ ಸರಿ. ನಿಮ್ಮ ಯಜಮಾನರು 6-7 ಜನ ಕಾರಿನಲ್ಲಿ ಇದ್ದವರನ್ನು ರಕ್ಷಿಸಲು ಹೋಗಿದ್ದರು ಎಂದು ಹೇಳಿದ್ದೀರಿ ಅವರ ಹೆಸರು ಹೇಳಬಹುದ ಎಂದರ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಲೈಟ್ ಕಂಬಕ್ಕೆ ಡಿಕ್ಕಿ ಪಡಿಸಿದ ಕಾರಿನ ಒಳಗಡೆ ಇದ್ದವರಲ್ಲಿ ಯಾರದರೂ ಬದುಕಿದ್ದಾರ ಎಂದರ ಸಾಕ್ಷಿ ಕೆಲವರು ಬದುಕಿದ್ದಾರೆ ಎಂದು ಉತ್ತರಿಸುತ್ತಾರೆ. ಅವರ ಹೆಸರು ಮತ್ತು ವಿಳಾಸವನ್ನು ತಿಳಿದುಕೊಂಡಿರುವುದಿಲ್ಲ. ಆ ಕಾರಿಗೆ insurance ಇತ್ತಾ ಇಲ್ಲವಾ ಎಂದು ನಾನು ತಿಳಿದುಕೊಂಡಿರುವುದಿಲ್ಲ. ಕಾರಿನವರು ಪರಿಹಾರ ಕೊಡಲು ಬಾಧ್ಯಸ್ಥರೇ ವಿನಃ ಪ್ರತಿವಾದಿಯರು ಬಾಧ್ಯಸ್ಥರಲ್ಲ ಎಂದರೆ ಸಾಕ್ಷಿ ಎಲೆಕ್ಟ್ರಿಕ್ ಶಾಕ್ ನಿಂದ ಮೃತ ಪಟ್ಟಿರುವುದರಿಂದ ಅವರೇ ಕೊಡಬೇಕು ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ F10 yelaradahalli ಎಂದು ಬರೆಸಿ ಹಾಕಿದ್ದೀರಿ ಅದರ ಅರ್ಥ ನಿಮಗೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು

ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವ ಮೊದರಲು ಓದಿ ತಿಳಿದುಕೊಂಡಿದ್ದೀರಿ ಎಂದರೆ ಸಾಕ್ಷಿ ಇಲ್ಲ ಕೇಳಿ ತಿಳಿದುಕೊಡಿದ್ದೇನೆ ಎಂದು ಉತ್ತರಿಸುತ್ತಾರೆ. ಪ್ರಮಾಣ ಪತ್ರಕ್ಕೆ ಸಹಿ ಮಾಡಿದ್ದೀರ ಎಂದರೆ ಸಾಕ್ಷಿ ಮಾಡಿರಬಹುದೇನೋ ಎಂದು ಉತ್ತರಿಸುತ್ತಾರೆ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯಾನುಡಿಯುತ್ತಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ test charge ಎಂದು ಬರೆಸಿ ಹಾಕಿದ್ದೀರಿ ಹಾಗೆಂದರೆ ಏನು ಅರ್ಥ ಎಂದು ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನೀವೇನಾದರು ಕೆ.ಇ.ಬಿಯವರಿಗೆ ಕರೆ ಮಾಡಿ ಕರೆಂಟ್ ಹೋಗಿದೆ ಎಂದು ಹೇಳಿದ್ದೀರ ಎಂದರೆ ಸಾಕ್ಷಿ ಮಾಹಿತಿ ಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಲಿಖಿತವಾಗಿ ಕೊಟ್ಟಿದ್ದೀರ ಎಂದರೆ ಸಾಕ್ಷಿ ಲಿಖಿತವಾಗಿ ಕೊಟ್ಟಿಲ್ಲ ಫೋನ್ ಮಾಡಿ ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ಕಾರಿನಲ್ಲಿ ಇದ್ದವರನ್ನು ರಕ್ಷಿಸಲು ಹೋಗುವುದಕ್ಕಿಂತ ಮುಂಚೆ ಕೆ.ಇ.ಬಿಯವರಿಗೆ ಕರೆ ಮಾಡಿ ಕರೆಂಟ್ ಹೋಗಿದೆ ಎಂದು ಮಾಹಿತಿ ಕೊಟ್ಟಿದ್ದೆವು ಏನು ಮಾಡಿದ್ದೀರಿ ಎಂದು ಕೇಳಿದ್ದೀರ ಎಂದರೆ ಸಾಕ್ಷಿ ಫೋನ್ ಮಾಡಿದಾಗ ಅವರು ಎತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಕಂಬದಲ್ಲಿ ಏನಾದರು ತೊಂದರೆಯಾದರೆ ಕೆ.ಇ.ಬಿಯವರೇ ಬಂದು ರಿಪೇರಿ ಮಾಡಬೇಕು ಎಂಬ ನಿಯಮವಿದೆ ಗೊತ್ತಾ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ನಮ್ಮ ಯಜಮಾನರು ಇನ್ನೂ 90 ವರ್ಷ ಬದುಕುತ್ತಿದ್ದರು ಎಂದು ಹೇಳಿದ್ದೀರಿ ಯಾವ ಆದಾರದ ಮೇಲೆ ಹೇಳಿದ್ದೀರಿ ಎಂದರೆ ಸಾಕ್ಷಿ ಬದುಕಬಹುದು ಎಂದು ಹೇಳಿದ್ದೆ ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರು ತೀರಿಕೊಂಡಾಗ ಅವರಿಗೆ ಎಷ್ಟು ವಯಸ್ಸಾಗಿತ್ತು ಎಂದರೆ ಸಾಕ್ಷಿ 47 ವರ್ಷ ವಯಸ್ಸಾಗಿತ್ತು ಎಂದು ಉತ್ತರಿಸುತ್ತಾರೆ. ಕೆ.ಇ.ಬಿಯವರು ಸರಿಯಾಗಿಯೇ ಕರೆಂಟ್ ಕಂಬವನ್ನು ಮತ್ತು ವಯರ್ ಗಳನ್ನು ನಿರ್ವಹಣೆ ಮಾಡಿದ್ದರು ಆದರೂ ನೀವು ಪರಿಹಾರ ಪಡೆಯುವ ಉದ್ದೇಶದಿಂದ ಕೆ.ಇ.ಬಿಯವರು ಸರಿಯಾಗಿ ನಿರ್ವಹಣೆ ಮಾಡಿದ್ದಲ್ಲಿ ಆ ರೀತಿ ಆಗುತ್ತಿರಲಿಲ್ಲವೆಂದು ನಿಮ್ಮ ಪ್ರಮಾಣ ಪತ್ರದಲ್ಲಿ ಸುಳ್ಳು ಹೇಳಿದ್ದೀರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಸಂಪ್ರದಾಯ ಮತ್ತು ಆಚರಣೆಯ ಪ್ರಕಾರ ಶವ ಸಂಸ್ಕಾರ ಮತ್ತು ಇತರೆ ಕಾರ್ಯಗಳಿಗೆ ರೂ.2 ಲಕ್ಷ ಖರ್ಚಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಹಾಜರ ಪಡಿಸಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಕಂಬ ಮುರಿದುಹೋಗಿದೆ ಎಂದರೆ

ಕರೆಂಟ್ ಹೊರಟು ಹೋಗಿದೆ ಎಂದೇ ಅರ್ಥ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಕಂಬ ಮುರಿದು ಹೋಗಿರುವ ಸ್ಥಳದಿಂದ ಯಲದಹಳ್ಳಿಯ ಫೀಡರ್ ಇರುವ ಸ್ಥಳ ಸುಮಾರು 3 ಕೀ.ಮೀ. ದೂರ ಆಗುತ್ತದೆ. ಕೆ.ಇ.ಬಿ ಕಛೇರಿ ಮತ್ತು ಫೀಡರ್ ಇರುವ ಸ್ಥಳ ಬೇರೆ ಬೇರೆ ಎಂದರೆ ಸರಿ. ಕರೆಂಟ್ ಕೊಡುವ ಫೀಡರ್ ಇರುವ ಸ್ಥಳದಿಂದ ಎಷ್ಟು ದೂರದಲ್ಲಿ ಕಂಬ ಮುರಿದುಹೋಗಿದೆ ಎಂದು ತಿಳಿದುಕೊಳ್ಳಲು test charge ಮಾಡುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. Test charge ಮಾಡುತ್ತಿದ್ದಾರೆ ಎಂದು ನಿಮ್ಮ ಯಜಮಾನರಿಗೆ ಗೊತ್ತಿದ್ದರೂ ಸಹ ಕಾರಿನವರನ್ನು ರಕ್ಷಿಸುವ ಸಲುವಾಗಿ ನಿಮ್ಮ ಯಜಮಾನರು ಅವರ ಸಾವನ್ನು ಅವರೇ ತಂದುಕೊಂಡಿದ್ದಾರೆ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. Test charge ಮಾಡುವುದು ರಕ್ಷಣಾತ್ಮಕ ದೃಷ್ಟಿಯಿಂದ ಎಂದರೆ ಸಾಕ್ಷಿ ಆ ಬಗ್ಗೆ ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಸಾರ್ವಜನಿಕರಿಗೆ ಅನುಕೂಲವಾಗುವ ದೃಷ್ಟಿಯಿಂದ ಪ್ರತಿವಾದಿಯರು ಎಲ್ಲಾ ಲೈನ್ ಅನ್ನು ಸರಿ ಮಾಡಿದ್ದರು ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ಯಜಮಾನರ ನಿರ್ಲಕ್ಷ್ಯತೆಯಿಂದ ಮರಣ ಹೊಂದಿದ್ದಾರೆ ವಿನಃ ಪ್ರತಿವಾದಿಯರ ಯಾವುದೇ ನಿರ್ಲಕ್ಷ್ಯತೆ ಇಲ್ಲ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ. ಪರಿಹಾರ ಬರಲಿ ಎಂದು ಸುಳ್ಳು ಕೇಸನ್ನು ದಾಖಲಿಸಿದ್ದೀಸರಿ ಎಂದರೆ ಸಾಕ್ಷಿ ಸರಿಯಲ್ಲ ಎಂದು ಉತ್ತರಿಸುತ್ತಾರೆ.

**ಮರು ವಿಚಾರಣೆ ಇರುವುದಿಲ್ಲ.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು

ಮದ್ದೂರು.